ಗೌರಿಬಿದನೂರು ಪಟ್ಟಣದಲ್ಲಿ ಕ.ರಾ.ರ ಸಾ.ಸ ಬಸ್ ಘಟಕ ಸ್ಥಾಪನೆ

181(183) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್(ಗೌರಿಬಿದನೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಗೌರಿಬಿದನೂರು ಪಟ್ಟಣದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಘಟಕವನ್ನು ಸ್ಥಾಪಿಸಲು ಸರ್ಕಾರದಿಂದ ಮಂಜೂರಾಗಿರುವುದು ನಿಜವಲ್ಲವೇ;

ಆ. ಹಾಗಿದ್ದಲ್ಲಿ ಇದುವರೆವಿಗೂ ಬಸ್ ಘಟಕವನ್ನು ಸ್ಥಾಪಿಸದೆ ವಿಳಂಬವಾಗಲು ಕಾರಣವೇನು;

ಇ. ಬಸ್ ಘಟಕವನ್ನು ಸಕಾಲದಲ್ಲಿ ಸ್ಥಾಪಿಸಿ, ಈ ಭಾಗದ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಂಡುವುದು ಯಾವಾಗ'

ಈ. ಈ ಹೊಸ ಬಸ್ ಘಟಕ ಸ್ಥಾಪನೆಗೆ ಆಯೋಜಿಸಿರುವ ಅಂದಾಜು ವೆಚ್ಚ ಎಷ್ಟು?

ಶ್ರೀ ಬಿ.ರಮಾನಾಥ್ ರೈ (ಸಾರಿಗೆ ಸಚಿವರು)

ಅ. ಹೌದು

ಆ. ಸಂಸ್ಥೆಯ ಆರ್ಥಿಕ ಪರಿಸ್ಥಿತಿಯಿಂದ ನಿರ್ಮಾಣ ಕಾರ್ಯ ಪ್ರಾರಂಭಿಸಲು ವಿಳಂಬವಾಗಿರುತ್ತದೆ . ಪ್ರಸ್ತುತ ಸಾಲಿನಲ್ಲಿ 60.00 ಲಕ್ಷ ರೂಗಳಿಗೆ ಆಡಳಿತಾತ್ಮಕ ಒಪ್ಪಿಗೆ ನೀಡಲಾಗಿದ್ದು ಶೀಘ್ರವಾಗಿ ಟೆಂಡರ್ ಕರೆದು ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಜರುಗಿಸಲಾಗಿದೆ.

ಇ. ಆರ್ಥಿಕ ಪರಿಸ್ಥಿತಿ ಅನುಗುಣವಾಗಿ ನಿರ್ಮಾಣ ಕಾರ್ಯ ಪೂರ್ಣಗೊಂಡ ನಂತರ ಪ್ರಯಾಣಿಕರಿಗೆ ಅನುಕೂಲ ಮಾಡಲಾಗುವುದು.

ಈ. ರೂ.60.00 ಲಕ್ಷಗಳು

ಗೌರಿಬಿದನೂರು ಪಟ್ಟಣಗಳಲ್ಲಿ ಆರಕ್ಷಕ ವಸತಿ ಸಮುಚ್ಛಯ ಕಟ್ಟಡ ನಿರ್ಮಾಣ

182(184) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್.(ಗೌರಿಬಿದನೂರು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಗೌರಿಬಿದನೂರು ಪಟ್ಟಣದಲ್ಲಿ ಆರಕ್ಷಕ ವಸತಿ ಸಮುಚ್ಚಯ ಕಟ್ಟಡವನ್ನು ನಿರ್ಮಿಸುವ ಪ್ರಸ್ತಾಪನೆಯು ಸರ್ಕಾರದ ಮುಂದಿದೆಯೆ

ಆ. ಹಾಗಿದ್ದರೆ ಈ ವಸತಿ ಕಟ್ಟಡಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು ಯಾವ ಅವಧಿಯಲ್ಲಿ ವಸತಿ ಕಟ್ಟಡ ಕಾಮಗಾರಿಯನ್ನು ಪೂರೈಸಲಾಗುವುದು

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಅ. ಹೌದು

ಆ. ಪರಿಶೀಲನೆಯಲ್ಲಿದೆ.

ದೇವನಹಳ್ಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಕಾಮಗಾರಿಗಳ ಪ್ರಗತಿ

185(34) ಶ್ರೀ ವಿ. ಸೋಮಣ್ಣ (ಚಿಕ್ಕಪೇಟೆ) : ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ನಾಗರೀಕ ವಿಮಾನ ಯಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?